**ಮುಂಜಾನೆ ಜಾಗಿಂಗಿಗೆ ಬಂದವರು, ಹಾಲು ಒಯ್ಯುವವರು, ರಿಕ್ಷಾದವರು, ಟಾಂಗಾದವರು ಮತ್ತು ಅಂಗಳದ ಎದೆಗೆ ರಂಗೋಲಿಯನ್ನಿಡುವ ಗೃಹಿಣಿಯರು ಸೇರಿದಂತೆ ಆ ಮಿನಾರುಗಳ ನಗರದ ಹತ್ತೂ ಸಮಸ್ತರು ಅಂದು ಮುಂಜಾನೆ ಅವರಿಬ್ಬರನ್ನು ಗುರುತಿಸಿದ್ದರು.**

ಪ್ರೇಮಿಗಳಿರಬೇಕು ಎಂಬ ಅಭಿಪ್ರಾಯಕ್ಕೆ ಬರುವ ಮೊದಲೇ ಅವರಿಬ್ಬರ ವಯಸ್ಸು ಮೂವತ್ತೈದು ಎಂಬುದು ಗೊತ್ತಾಗಿ ಛೆ, ಅದು ಪ್ರೀತಿ ಮುಗಿದು ಹೋಗುವ ವಯಸ್ಸು ಎನ್ನಿಸಿಬಿಡುತ್ತಿತ್ತು. ಗಂಡ ಹೆಂಡತಿಯಿರಬೇಕು ಅಂದುಕೊಳ್ಳುವಷ್ಟರಲ್ಲಿ, ಅದೆಲ್ಲಿ ಸಾಧ್ಯ? ಯಾವ ಗಂಡ–ಹೆಂಡಿರು ತಮ್ಮ ಮೂವತ್ತೈದನೇ ವಯಸ್ಸಿನಲ್ಲಿ ಹೀಗೆ ಇಷ್ಟೊಂದು ಅನ್ಯೋನ್ಯವಾಗಿ ತಮ್ಮೂರಲ್ಲದ ಊರಿನಲ್ಲಿ, ಹೊತ್ತಲ್ಲದ ಹೊತ್ತಿನಲ್ಲಿ ಹೀಗೆ ತೆಕ್ಕೆ ಬಡಿದುಕೊಂಡು ಎದೆಯೊಳಗಿನ ಮಾತು ಗಂಟಲಿಗೆಳೆದುಕೊಂಡು, ಆಡಲಾಗದ್ದನ್ನು ಕಣ್ಣಿನ ಜವಾಬ್ದಾರಿಗೆ ಬಿಟ್ಟು ಮಿನಾರುಗಳ ನಗರದ ಗಲ್ಲಿಗಲ್ಲಿ ಅಲೆಯುತ್ತಾರೆ? ಎಂಬ ಪಾರಂಪರಿಕ ಅನುಮಾನ ಮೂಡಿ ಸುಮ್ಮನಾಗಿಬಿಡುತ್ತಿದ್ದರು. ಹಾಗಾದರೆ ಅವರು ಕಾಫಿರರಿಬೇಕು ಎಂಬುದಾಗಿ ಟಾಂಗಾದ ಕುದುರೆಯ ಜೂಲಿನ ಮೇಲೆ ಕೈಯಿಟ್ಟ ತುರುಕನೊಬ್ಬನು ಮನಸ್ಸಿನಲ್ಲೇ ಅಂದುಕೊಳ್ಳುತ್ತಿದ್ದ ಹೊತ್ತಿಗೆ–

